# ರಂಗಭೂಮಿ ಬಿಡಲಾರೆ ಸಿನಿಮಾ ತೊರೆಯಲಾರೆ

ಪ್ರತಿಭಾವಂತ ನಟಿ ಶ್ವೇತಾ ಶ್ರೀನಿವಾಸ್ ಪ್ರತಿಭೆಯ ಆಚೆಗಿನ ಮಾನದಂಡಗಳೇ ಮುಖ್ಯವಾಗಿರುವ ಕನ್ನಡ ಚಿತ್ರರಂಗದಲ್ಲಿ ನಿರ್ಲಕ್ಷಿತ ನಟಿ. ಹಾಗೆಂದು ಆವರಿಗೆ ಬೇಸರವೇನೂ ಇಲ್ಲ. ತನ್ನ ಲಕ್ಷ್ಯ ಮತ್ತು ತೃಪ್ತಿ ಎಲ್ಲವೂ ರಂಗಭೂಮಿಯಲ್ಲಿದೆ ಎಂಬುದು ಅವರ ನಂಬಿಕೆ.

■ ಪದ್ಮನಾಭ ಭಟ್

'ಪಂಚರಂಗಿ' ಸಿನಿಮಾದಲ್ಲಿ ಪುಟ್ಟ ಪಾತ್ರದ ಮೂಲಕವೇ ಗಮನಸೆಳೆದಿದ್ದ ಪ್ರತಿಭಾವಂತ ನಟಿ ಶ್ವೇತಾ ಶ್ರೀನಿವಾಸ್. ಆ ಪಾತ್ರ ಅವರಿಗೆ ಜನಪ್ರಿಯತೆ ತಂದುಕೊಟ್ಟಿತೇ ವಿನಾ ಸಾಲು ಸಾಲು ಅವಕಾಶಗಳ ಸುಗಮದಾರಿಯನ್ನೇನೂ ತೆರೆಯಲಿಲ್ಲ. ಹಾಗಂತ ಶ್ವೇತಾ ಪೂರ್ತಿ ಮಾಯವಾಗಿಯೂ ಹೋಗಲಿಲ್ಲ. ಆಗೀಗ ಸಿಗುವ ಸಣ್ಣ ಪಾತ್ರಗಳನ್ನೇ ತಮ್ಮ ಪ್ರತಿಭೆಯ ಮೂಲಕ ಉಜ್ವಲಗೊಳಿಸುತ್ತ ಬಂದಿದ್ದಾರೆ.

ಹೀಗೆ ಸಿನಿಮಾ ಕ್ಷೇತ್ರದಲ್ಲಿ ಎತ್ತರಕ್ಕೆ ಏರಲು ಸಾಧ್ಯವಾಗಿಲ್ಲ ಎಂಬ ಬಗ್ಗೆ ಅವರಿಗೆ ಕೊರಗಿಲ್ಲ. ಹೊರಜಗತ್ತಿನಲ್ಲಿ ಗಳಿಸುವ ಯಶಸ್ಸು ಎಷ್ಟು ಮುಖ್ಯವೋ ತನ್ನೊಳ ಜಗತ್ತಿನ ನಿರಂತರ ಸವಾಲುಗಳನ್ನು ಎದುರಿಸಿ ಗೆಲ್ಲುವುದೂ ಅಷ್ಟೇ ಮುಖ್ಯ ಎನ್ನುವುದು ಶ್ವೇತಾ ನಂಬಿಕೆ. ಅವರ ಒಳಮನಸ್ಸಿನ ಶೋಧನೆಗೆ ಸಮರ್ಥವಾಗಿ ಒದಗಿಬಂದಿರುವುದು ರಂಗಭೂಮಿ. ಹಾಗಾಗಿಯೇ ಅವರು ಸಿನಿಮಾ, ಧಾರಾವಾಹಿ ಕ್ಷೇತ್ರಗಳಿಗಿಂತ ಹೆಚ್ಚಿನ ಆಸ್ಥೆಯಿಂದ ರಂಗಭೂಮಿಯಲ್ಲಿ ತೊಡಗಿಕೊಂಡಿದ್ದಾರೆ.

'ರಂಗರಥ' ಎಂಬ ರಂಗತಂಡವೊಂದನ್ನು ಆರಂಭಿಸಿರುವ ಶ್ವೇತಾ, ಈ ತಂಡದಿಂದ 'ಮಾಳವಿಕಾಗ್ನಿಮಿತ್ರ' ನಾಟಕವನ್ನು ಹೊಸ ರೂಪದೊಂದಿಗೆ ರಂಗಕ್ಕೆ ತಂದಿದ್ದಾರೆ. ಈ ನಾಟಕ ಹಲವು ಯಶಸ್ವಿ ಪ್ರಯೋಗಗಳನ್ನು ಕಂಡಿದೆ. ಮೊದಲ ಪ್ರಯತ್ನಕ್ಕೆ ದೊರೆತ ಈ ಪ್ರತಿಸ್ಪಂದನದಿಂದ ಸ್ಫೂರ್ತಿಗೊಂಡು ಯಕ್ಷಗಾನ ಮತ್ತು ಒಡಿಸ್ಸಿ ನೃತ್ಯದ ಜುಗಲ್ಬಂದಿಯ ರಂಗಪ್ರಯೋಗಕ್ಕೆ ಸಜ್ಜಾಗಿದ್ದಾರೆ. ಅವರ ಸ್ನೇಹಬಳಗದ ಸಹನಾ ಮಯ್ಯ, ಆಸಿಫ್ ಕ್ಷತ್ರಿಯ, ವಿಲೋಕ್ ಕೌಶಿಕ್ ಮತ್ತು ವಿನಯ್ ಗೌಡ ಕೂಡ ಈ ಕನಸಿಗೆ ಜೊತೆಯಾಗಿ ನಿಂತಿದ್ದಾರೆ.

ರಂಗಭೂಮಿಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಳ್ಳುತ್ತಿರುವಂತೆಯೇ ಸಿನಿಮಾ ಮತ್ತು ಕಿರುತೆರೆಯಲ್ಲಿಯೂ ಅವರು ಸಕ್ರಿಯರಾಗಿದ್ದಾರೆ. 'ರುದ್ರಿ' ಸಿನಿಮಾದ ಪಾತ್ರವೊಂದರಲ್ಲಿ ನಟಿಸಿದ್ದಾರೆ. 'ಧನಕ' ಎಂಬ ಇನ್ನೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾದಲ್ಲಿಯೂ ನಟಿಸಿದ್ದಾರೆ. ಹಾಗೆಯೇ ಕಲರ್ಸ್ ಸೂಪರ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಭೂಮಿ ತಾಯಾಣೆ' ಧಾರಾವಾಹಿಯಲ್ಲಿಯೂ ಅವರು ನಾಯಕಿಯ ತಾಯಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಸಿನಿಮಾ, ರಂಗಭೂಮಿ ಮತ್ತು ಧಾರಾವಾಹಿ ಈ ಮೂರೂ ಮಾಧ್ಯಮಗಳ ನಟನೆಯ ಕೌಶಲಗಳು ಬೇರೆ ಬೇರೆ ಎಂಬುದನ್ನು ಶ್ವೇತಾ ಒಪ್ಪುವುದಿಲ್ಲ. 'ಎಲ್ಲ ಕಡೆಗಳಲ್ಲಿಯೂ ನಟರು ನಟರೇ ಆಗಿರುತ್ತಾರೆ. ನಾವು ಒಂದು ಪಾತ್ರ, ಸನ್ನಿವೇಶ, ಭಾವಸ್ಥಿತಿಗಳಿಗೆ ಆ ಕ್ಷಣದಲ್ಲಿ ಹೇಗೆ ಜೀವ ತುಂಬುತ್ತೇವೆ ಎಂಬುದು ತುಂಬ ಮುಖ್ಯವಾಗುತ್ತದೆ. ಆ ಇನ್‌ಸ್ಟಂಟ್ ಗುಣ ಕಲಾವಿದರಿಗೆ ಬೇಕೇ ಬೇಕು. ಆ ಇನ್‌ಸ್ಟಂಟ್ ಶಕ್ತಿಗಾಗಿ ನನ್ನನ್ನು ನಾನು ಸಿದ್ಧಗೊಳಿಸುತ್ತಲೇ ಇರುತ್ತೇನೆ' ಎನ್ನುತ್ತಾರೆ ಶ್ವೇತಾ.

ಕನ್ನಡ ಚಿತ್ರರಂಗದಲ್ಲಿ ಮುನ್ನೆಲೆಗೆ ಬರಲು ಪ್ರತಿಭೆಯೊಂದೇ ಮಾನದಂಡ ಅಲ್ಲ ಎಂಬ ಕಹಿಸತ್ಯವನ್ನೂ ಅವರು ಯಾವುದೇ ಭಿಡೆ ಇಲ್ಲದೆ ಹೇಳುತ್ತಾರೆ. 'ನಾವು ಎಷ್ಟೇ ಇಲ್ಲ ಇಲ್ಲವೆಂದರೂ ನಮ್ಮ ಚಿತ್ರರಂಗದಲ್ಲಿ ಕೆಲವು ಹುಳುಕುಗಳು ಇದ್ದೇ ಇವೆ. ಇಲ್ಲಿ ಅವಕಾಶ ಪಡೆದುಕೊಳ್ಳಲು ನಮ್ಮ ಮೈಬಣ್ಣ ಅರ್ಹತೆಯಾಗುತ್ತದೆ, ಹುಬ್ಬಿನ ತೀಡು ಮೈಮಾಟ ಅರ್ಹತೆಯಾಗುತ್ತದೆ. ಹಾಗೆಯೇ ಕೆಲವು ವಿಷಯಗಳಲ್ಲಿ ರಾಜಿ ಆಗುವುದೂ ಅರ್ಹತೆಯಾಗುತ್ತದೆ. ಅತ್ತಿಗೆ, ಅಕ್ಕ, ಚಿಕ್ಕಮ್ಮ ಇಂಥ ಪಾತ್ರಗಳಿಗೆ ಬೆಳ್ಳಗಿರುವವರೇ ಬೇಕು. ಅದೇ ಕಪ್ಪಗಿರುವವರಿಗೆ ಮನೆಕೆಲಸದವಳು ಅಥವಾ ಅದಕ್ಕೆ ಸಮಾನಾಂತರ ಪಾತ್ರಗಳು ಸಿಗುತ್ತವೆ. ನನಗೆ ಗೊತ್ತಿರುವವರೇ ಮೂರು ನಾಲ್ಕು ಪ್ರತಿಭಾವಂತ ನಟರು ಇದೇ ಕಾರಣಕ್ಕೆ ಸಣ್ಣ ಪುಟ್ಟ ಪಾತ್ರಗಳಿಗೆ ಸೀಮಿತವಾಗಿದ್ದಾರೆ' ಎಂದು ಅವರು ಬೇಸರದಿಂದಲೇ ಹೇಳುತ್ತಾರೆ.

'ರಂಗಭೂಮಿಯಿಂದಲೇ ನಾನು ನಟಿಯಾಗಿ ರೂಪುಗೊಂಡಿದ್ದು. ರಂಗಭೂಮಿ ನನ್ನ ಪಾಲಿಗೆ ನನ್ನನ್ನು ನಾನು ಹುಡುಕಿಕೊಳ್ಳುವ ಮಾಧ್ಯಮ. ಹಾಗಾಗಿ ರಂಗಭೂಮಿಯನ್ನು ಬಿಟ್ಟು ಎಂದಿಗೂ ಬದುಕಲಾರೆ' ಎಂದು ಸ್ಪಷ್ಟವಾಗಿ ಹೇಳುವ ಶ್ವೇತಾ, ಇನ್ನು ಕೆಲವು ವರ್ಷಗಳ ನಂತರ ಸಿನಿಮಾ ನಿರ್ದೇಶನ ಮಾಡುವ ಕನಸನ್ನು ತನ್ನ ಒಡಲ ಒಳಗೆ ಅನುಭವದ ಕಾವಿನಲ್ಲಿಟ್ಟು ಕಾಪಿಡುತ್ತಿದ್ದಾರೆ. ■

